**<u>ದಿನಾಂಕಃ 25-11-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಶ್ರೀ ಎಸ್.ಆರ್.ಹೆಚ್., ಜೆಡಿಆರ್ ನಂ. 1 ಮತ್ತು 2 ನೇ ಪರ ವಕೀಲರಿಂದಃ</u>**

**1.** ನಾನು 01-06-2001 ರಂದು ವಕೀಲರು ಅಂತಾ ನನ್ನ ಹೆಸರನ್ನು ನೋಂದಣಿ ಮಾಡಿಕೊಂಡಿರುತ್ತೇನೆ. ನಾನು ಫೆಬ್ರುವರಿ-2002 ರಿಂದ 2018 ರವರೆಗೆ ಶ್ರೀ ಎಸ್.ಆರ್. ನೆಲವಗಿ, ವಕೀಲರ ಹತ್ತಿರ ಕಿರಿಯ ವಕೀಲ ಅಂತಾ ಕೆಲಸ ಮಾಡುತ್ತಿದ್ದೆ.

**2.** ಓ.ಎಸ್. ನಂಬರ 71/1999 ರಲ್ಲಿ ನಾನು ವಕಾಲತ್ತನಲ್ಲಿ ನಮ್ಮ ಹಿರಿಯ ವಕೀಲರಾದ ಶ್ರೀ ಎಸ್.ಆರ್. ನೆಲವಗಿ ಇವರೊಂದಿಗೆ ಇರಬಹುದು ಆದರೆ ನೆನಪಿಲ್ಲ. ಎಫ್.ಡಿ.ಪಿ. ನಂ. 10/2013 ಈ ಪ್ರಕರಣದಲ್ಲಿ ನಾನು ವಕಾಲತ್ತ ಸಲ್ಲಿಸಿರುತ್ತೇನೆ. ಆ ಪ್ರಕರಣದಲ್ಲಿ ಬಹುಶಃ ನಾನು ವೈಯಕ್ತಿಕವಾಗಿ ವಕಾಲತ್ತ ಸಲ್ಲಿಸಿರಬಹುದು. ನಾನು ಬಸವ್ವ ಹಾದಿಮನಿ ಇವರ ಮುಕ್ತಿಯಾರ ಪರವಾಗಿ ಹಾಜರಾಗಿದ್ದೆ. ಸದರಿ ದರಾಖಾಸ್ತ ಅರ್ಜಿಯನ್ನು ನಾನೇ ಸ್ವತಂತ್ರವಾಗಿ ಹಾಜರಾಗಿ ಸಲ್ಲಿಸಿರುತ್ತೇನೆ ಅಂದರೆ ಸರಿ.

**3.** ಮೃತ ಬಸವ್ವ ಇವಳು ತನಗೆ ವಯಸ್ಸಾಗಿದ್ದರಿಂದ ಓಡಾಡಲು ಆಗದೇ ಇರುವುದರಿಂದ ಶಾಂತಪ್ಪ ಹಾದಿಮನಿ ಇವರಿಗೆ ಮುಕ್ತಿಯಾರ ಪತ್ರ ಬರೆದುಕೊಟ್ಟಿದ್ದರು. ಅದೇ ರೀತಿ ಅಸಲು ದಾವಾ ನಂಬರ 71/1999 ನ್ನು ಮೃತ ಬಸವ್ವ ಇವಳು ತನ್ನ ಮುಕ್ತಿಯಾರ ಮೂಲಕ ಸಲ್ಲಿಸಿದ್ದಳು ಅಂದರೆ ನೆನಪಿಲ್ಲ. ಪ್ರಸ್ತುತ ಪ್ರಕರಣದಲ್ಲಿ ನಾನು ಶಾಂತಪ್ಪನ ಪರವಾಗಿ ಇರುವ ಮುಕ್ತಿಯಾರ ಪತ್ರವನ್ನು ಹಾಜರಪಡಿಸಿರುತ್ತೇನೆ. ಅಸಲು ದಾವಾ ನಂಬರ 71/1999 ರಲ್ಲಿ ನೀಡಿದ ಮುಕ್ತಿಯಾರ ಪತ್ರವನ್ನೆ, ಈ ಪ್ರಕರಣದಲ್ಲಿ ಹಾಜರಪಡಿಸಿರುತ್ತೇವೆ ಅಥವಾ

ಬೇರೆ ಮುಕ್ತಿಯಾರ ಪತ್ರ ಬರೆದುಕೊಟ್ಟಿರುತ್ತಾಳೆಯೇ ಅಂತಾ ನೆನಪಿಲ್ಲ. ಈ ಪ್ರಕರಣದಲ್ಲಿ ಬಸವ್ವ ಇವಳು ಬರೆದುಕೊಟ್ಟ ಮುಕ್ತಿಯಾರ ಪತ್ರ ಹಾಜರಪಡಿಸಿಲ್ಲ ಅಂದರೆ ನೆನಪಿಲ್ಲ.

**4.** ಅಸಲು ದಾವಾ ನಂಬರ 71/1999 ನ್ನು ದಾಖಲಿಸಿದ ನಂತರ ಬಸವ್ವ ಇವಳು ನ್ಯಾಯಾಲಯದಲ್ಲಿ ಬಂದು ಹಾಜರಾದ ಬಗ್ಗೆ ನನಗೆ ನೆನಪಿಲ್ಲ. ಸಾಕ್ಷಿ ಸ್ವತಃ ಹೇಳುತ್ತಾರೆ ಕಛೇರಿಗೆ ಬಂದಿರುತ್ತಾರೆ. ಕೇಸ್ ಇದ್ದಾಗೆಲ್ಲಾ ಬಸವ್ವ ಇವಳು ನಮ್ಮ ಕಛೇರಿಗೆ ಬರುತ್ತಿದ್ದಳು. ಅದೇ ರೀತಿ ಎಫ್‌ಡಿಪಿ ಪ್ರಕರಣದಲ್ಲಿ ಬಸವ್ವ ಇವಳು ನಮ್ಮ ಕಛೇರಿಗೆ ಬರುತ್ತಿದ್ದಳು. ಬಸವ್ವ ಇವಳು ನ್ಯಾಯಾಲಯದ ಮುಂದೆ ಹಾಜರಾಗಲು ಏನೂ ತೊಂದರೆ ಇತ್ತು ಅಂದರೆ ಸಾಕ್ಷಿ ಅವಳಿಗೆ ವಯಸ್ಸಾಗಿದ್ದರಿಂದ ಬಹಳ ಹೊತ್ತು ನಿಲ್ಲಲ್ಲು ಆಗುತ್ತಿರಲಿಲ್ಲ, ಹೀಗಾಗಿ ಕಛೇರಿಗೆ ಮಾತ್ರ ಬಂದು ಹೋಗುತ್ತಿದ್ದಳು. ನ್ಯಾಯಾಲಯದಲ್ಲಿ ಸಾಮಾನ್ಯವಾಗಿ ವಯಸ್ಸಾದವರಿಗೆ ಕುಳಿತುಕೊಳ್ಳಲು, ನೀರು ಕುಡಿಯಲು ಹಾಗೂ ಲಿಫ್ಟ್‌ನ್ ವ್ಯವಸ್ಥೆ ಸಹ ಇರುತ್ತದೆ ಅಂದರೆ ಸರಿ.

**5.** ಮೃತ ಬಸವ್ವ ಇವಳಿಗೆ ಅನಾರೋಗ್ಯದಿಂದ ಪಾರ್ಶುವಾಯು ಪೀಡಿತಳಾಗಿದ್ದಳು ಅಂದರೆ ಆಗಿದ್ದು ನಿಜ, ಆದರೆ ನಂತರ ಔಷದೋಪಚಾರಗಳಿಂದ ಅವಳು ಗುಣಮುಖಳಾಗಿ ತನ್ನ ಕೆಲಸ ತಾನೇ ಮಾಡುತ್ತೇನೆ ಹಾಗೂ ಓಡಾಡುತ್ತೇನೆ ಅಂತಾ ಹೇಳಿದ್ದಳು. ಬಸವ್ವ ಇವಳಿಗೆ 2020 ನೇ ಇಸ್ವಿಯಲ್ಲಿ ಪಾರ್ಶ್ವವಾಯು ಆಗಿತ್ತು ಅಂದರೆ ಸುಳ್ಳು. ಅವಳಿಗೆ 2010 ರಲ್ಲಿ ಪಾರ್ಶ್ವುವಾಯು ಆಗಿತ್ತು ಅಂದರೆ ನನಗೆ ಇಸ್ವಿ ಗೊತ್ತಿಲ್ಲ. 2010 ರಲ್ಲಿ ಬಸವ್ವ ಇವರಿಗೆ ಪಾರ್ಶ್ವುವಾಯು ಆಗಿದ್ದರಿಂದ ಅವಳು ಓಡಾಡುತ್ತಿರಲಿಲ್ಲ, ಮಲಗಿ ಕೊಂಡೆ ಇದ್ದಳು ಅಂದರೆ ಸರಿಯಲ್ಲ. ಬಸವ್ವ ಇವಳಿಗೆ 1999 ರಿಂದ ಸರಿಯಾಗಿ ಕಿವಿ ಕೇಳುತ್ತಿರಲಿಲ್ಲ ಅಂದರೆ ಸುಳ್ಳು.

**6.** ಎಫ್‌ಡಿಪಿ ನಂ. 10/2013 ಹಾಗೂ ದರಾಖಾಸ್ತ ಅರ್ಜಿ ಸಲ್ಲಿಸುವಾಗ ಬಸವ್ವ ಇವಳು ಆರೋಗ್ಯದಿಂದ ಇದ್ದಳು. ಅವಳ ಆರೋಗ್ಯ ಚೆನ್ನಾಗಿದ್ದರೆ ಅವಳೇ ಸ್ವತಃ ನ್ಯಾಯಾಲಯಕ್ಕೆ ಹಾಜರಾಗುತ್ತಿದ್ದಳು ಅಂದರೆ ಸಾಕ್ಷಿ ಅದು ಅವಳ ವೈಯಕ್ತಿಕ ಇಚ್ಛೆ ಇರುತ್ತದೆ.

**7.** ಬಸವ್ವ ಇವಳು ನಮ್ಮ ಕಛೇರಿಗೆ ಹಾಗೂ ನ್ಯಾಯಾಲಯದ ಮುಂದೆ ಯಾವ ಕಾಲಕ್ಕೂ ಬಂದಿಲ್ಲ ಅಂದರೆ ಸುಳ್ಳು. ಬಸವ್ವ ಇವಳು ಎಫ್‌ಡಿಪಿ ಪ್ರಕರಣ ಇದ್ದಾಗ ನ್ಯಾಯಾಲಯಕ್ಕೆ ಬಂದಿದ್ದಳು, ಆದರೆ ದಿನಾಂಕ ನೆನಪಿಲ್ಲ. ಬಸವ್ವ ಇವಳು ನ್ಯಾಯಾಲಯಕ್ಕೆ ಬಂದು ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿದ ಬಗ್ಗೆ ನೆನಪಿಲ್ಲ. ಎಫ್.ಡಿ.ಪಿ. ನಂಬರ 10/2013 ನ್ನು ದಾಖಲಿಸುವ ಕಾಲಕ್ಕೆ ಶಾಂತಪ್ಪ ಇವರಿಗೆ ಬಸವ್ವ ಇವಳ ಆರೋಗ್ಯದ ಬಗ್ಗೆ ಕೇಳಿದ್ದೆ. ಎಫ್.ಡಿ.ಪಿ. ಹಾಗೂ ದರಾಖಾಸ್ತ ಅರ್ಜಿ ಸಲ್ಲಿಸುವ ಕಾಲಕ್ಕೆ ಬಸವ್ವ ಇವಳು ನಮ್ಮ ಕಛೇರಿಗೆ ಬಂದು ಹೋಗಲು ಸಾಧ್ಯವಿದ್ದರೆ ಸದ್ರಿ ಅರ್ಜಿಗಳಿಗೆ ಅವಳ ಸಹಿಗಳನ್ನು ಏಕೆ ಪಡೆದಿಲ್ಲ ಅಂದರೆ ಸಾಕ್ಷಿ ಅವಳು ಮುಕ್ತಿಯಾರ ಪತ್ರ ಮಾಡಿಕೊಟ್ಟಿದ್ದರಿಂದ ಅವಳ ಸಹಿ ನನಗೆ ಅರ್ಜಿಗಳ ಮೇಲೆ ಅವಶ್ಯಕ ಎನಿಸಲಿಲ್ಲ. ಒಬ್ಬ ವ್ಯಕ್ತಿ ಮುಕ್ತಿಯಾರ ಪತ್ರ ಬರೆದುಕೊಟ್ಟಿದ್ದರು ಸಹ ಆತ ಸ್ವತಃ ಬಂದು ಅರ್ಜಿ ಸಲ್ಲಿಸಲು ಕಾನೂನಿನಡಿಯಲ್ಲಿ ಯಾವುದೇ ತೊಡಕು ಇರುವುದಿಲ್ಲ ಅಂದರೆ ಸರಿ. ಎಫ್‌ಡಿಪಿ ಹಾಗೂ ದರಖಾಸ್ತ ಅರ್ಜಿಗಳಿಗೆ ಬಸವ್ವ ಇವಳ ಸಹಿಗಳ ಅವಶ್ಯಕತೆ ಇರಲಿಲ್ಲ ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**8.** ಬಸವ್ವ ಇವಳು ಬರೆದುಕೊಟ್ಟ ಮುಕ್ತಿಯಾರ ಪತ್ರವನ್ನು ಈ ಮೊದಲು ನೋಡಿರುತ್ತೇನೆ. ಸದರಿ ಮುಕ್ತಿಯಾರ ಪತ್ರಕ್ಕೆ ಪ್ರಮಾಣ ಪತ್ರ ಬರೆಯುವವರ ಪರಿಚಯ ಇರುತ್ತದೆ ಎಂದು ನಾನೇ ಸಹಿ ಮಾಡಿರುತ್ತೇನೆ ಅಂದರೆ ನೆನಪಿಲ್ಲ. ಮುಕ್ತಿಯಾರ ಪತ್ರದಲ್ಲಿ ವಯಸ್ಸಾಗಿದ್ದರಿಂದ ನ್ಯಾಯಾಲಯಕ್ಕೆ ಬರಲು ಆಗುವುದಿಲ್ಲ ಅಂತಾ ಬರೆದಿರುತ್ತಾರೆ. ಮುಕ್ತಿಯಾರ ಪತ್ರದಲ್ಲಿ ಬಸವ್ವ ಇವಳ ವಯಸ್ಸು ಎಷ್ಟು

ಬರೆದಿರುತ್ತಾರೆ ಅಂತಾ ನೆನಪಿಲ್ಲ. ಬಸವ್ವ ಇವಳು 1999 ರಿಂದ ಇಲ್ಲಿಯವರೆಗೂ ನ್ಯಾಯಾಲಯದ ಮುಂದೆ ಹಾಜರಾಗಿಲ್ಲ, ಜಿಪಿಎ ಮೂಲಕ ಪ್ರಕರಣಗಳು ನಡೆಯುತ್ತಿದ್ದವು ಅಂದರೆ ಸಾಕ್ಷಿ ಅವಳು ನ್ಯಾಯಾಲಯಕ್ಕೆ ಬಂದಿರುತ್ತಾಳೆ, ಪ್ರಕರಣಗಳು ಜಿಪಿಎ ಮೂಲಕವೇ ನಡೆದಿರುತ್ತವೆ. ಅಸಲು ದಾವಾ ನಂಬರ 71/1999, ಎಫ್‌ಡಿಪಿ 10/2013 ಹಾಗೂ ಈ ಪ್ರಕರಣದಲ್ಲಿ ಬಸವ್ವ ಇವಳು ನ್ಯಾಯಾಲಯದ ಮುಂದೆ ಹಾಜರಾದ ಬಗ್ಗೆ ರೋಜನಾಮೆಯಲ್ಲಿ ನಮೂದು ಇರುವುದಿಲ್ಲ ಅಂದರೆ ಸಾಕ್ಷಿ ಹೌದು, ಆದರೆ ನ್ಯಾಯಾಲಯಕ್ಕೆ ಬಂದಿರುತ್ತಾರೆ. ಬಸವ್ವ ಇವಳು ನ್ಯಾಯಾಲಯದ ಮುಂದೆ ಹಾಜರಾಗಿದ್ದರೆ ಅದರ ಕುರಿತು ರೋಜನಾಮೆಯಲ್ಲಿ ನಮೂದಾಗುತ್ತಿತ್ತು ಅಂದರೆ ಸಾಕ್ಷಿ ಅವಳು ಬರುತ್ತಿದ್ದಳು ಅಂತಾ ಹೇಳುತ್ತಾರೆ.

**9.** ಅಸಲು ದಾವಾ ನಂಬರ 71/1999 ನ್ನು ದಾಖಲಿಸುವ ಇಚ್ಛೆಯನ್ನು ಬಸವ್ವ ಹೊಂದಿರಲ್ಲಿ ಅಂದರೆ ಆ ಕಾಲಕ್ಕೆ ನಾನು ಇರಲಿಲ್ಲ, ನನಗೆ ಗೊತ್ತಿಲ್ಲ. ಅದೇ ರೀತಿ ಬಸವ್ವ ಇವಳಿಗೆ ಎಫ್‌ಡಿಪಿ ನಂಬರ 10/2013 ನ್ನು ಸಹ ದಾಖಲಿಸಲು ಯಾವುದೇ ಇಚ್ಛೆ ಇರಲಿಲ್ಲ ಅಂದರೆ ಸುಳ್ಳು. ಮಏತ ಬಸವ್ವ ಇವಳು ಎಫ್‌ಡಿಪಿ ಹಾಗೂ ಪ್ರಸ್ತುತ ದರಖಾಸ ಅರ್ಜಿ ಸಲ್ಲಿಸಲು ನನಗೆ ವೈಯಕ್ತಿಕವಾಗಿ ಯಾವುದೇ ಮಾಹಿತಿ ನೀಡಿಲ್ಲ ಅಂದರೆ ಸುಳ್ಳು, ಕಛೇರಿಗೆ ಬಂದು ಮಾಹಿತಿ ನೀಡಿರುತ್ತಾಳೆ. ಬಸವ್ವ ಇವಳು ಕಛೇರಿಗೆ ಬಂದು ನನಗೆ ಮಾಹಿತಿ ನೀಡಿದ್ದರೆ ನಾನು ಅವಳ ಸಹಿಯನ್ನೇ ದರಖಾಸ್ತ ಹಾಗೂ ಎಫ್‌ಡಿಪಿ ಅರ್ಜಿಗಳಿಗೆ ಸಹಿ ಪಡೆಯುತ್ತಿದ್ದೇ ಅಂದರೆ ಜಿಪಿಎ ಮೂಲಕ ನಡೆಸಿಕೊಡಿ ಅಂತಾ ಹೇಳಿದ್ದಳು. ಎಫ್‌ಡಿಪಿ ಹಾಗೂ ದರಖಾಸ್ತ ಅರ್ಜಿಯ ವೇರಿಫಿಕೇಶನ್‌ನಲ್ಲಿ ಜಿಪಿಎ ಮಾಹಿತಿ ನೀಡಿರುತ್ತಾನೆ ಅಂತಾ ಬರೆಸಿರುತ್ತೇನೆ ಅಂದರೆ ಸಾಕ್ಷಿ ಇಬ್ಬರೂ ಬಂದಿದ್ದರು ಆದರೆ ಜಿಪಿಎ ಮಾಹಿತಿ ನೀಡಿರುತ್ತಾರೆ ಅಂತಾ ಬರೆಸಿರುತ್ತೇನೆ.

**10.** ಬಸವ್ವ ಇವಳು ಮುಕ್ತಿಯಾರ ಪತ್ರದಲ್ಲಿ ಅವಳಿಗೆ ಆರೋಗ್ಯ ಸರಿ ಇರುವುದಿಲ್ಲ ಅಂತಾ ಬರೆಸಿದ ವಿಷಯ ನಿಜವಿರುತ್ತದೆಯೇ ಅಂದರೆ ಸಾಕ್ಷಿ ಹೌದು, ಅದು ನಿಜವಿರುತ್ತದೆ ಅಂತಾ ಹೇಳುತ್ತಾರೆ.

**11.** ಬಸವ್ವ ಇವಳ ಮೃತ್ಯು ಪತ್ರದಲ್ಲಿ ಅವಳಿಗೆ 1 ವರ್ಷದ ಹಿಂದೆ ಪಾರ್ಶ್ವವಾಯು ಹೊಡೆದು ಹಾಸಿಗೆ ಹಿಡಿದಿರುತ್ತಾಳೆ ಅಂತಾ ಬರೆದಿರುತ್ತದೆ ಅಂದರೆ ಸರಿ. ಎಫ್‌ಡಿಪಿ ಹಾಗೂ ದರಖಾಸ್ತನಲ್ಲಿ ನನಗೆ ವಕೀಲರ ಫೀಯನ್ನು ಶಾಂತಪ್ಪ ನೀಡುತ್ತಿದ್ದ ಅಂದರೆ ಸಾಕ್ಷಿ ಶಾಂತಪ್ಪ ಹಾಗೂ ಬಸವ್ವ ಇಬ್ಬರೂ ನೀಡುತ್ತಿದ್ದರು ಅಂತಾ ಹೇಳುತ್ತಾರೆ. ಶಾಂತಪ್ಪ ಈತ ನನಗೆ ಫೀ ಯನ್ನು ನೀಡುತ್ತಿದುದ್ದರಿಂದ ನನಗೆ ಆತನ ಬಗ್ಗೆ ಹೆಚ್ಚಿನ ಹಿತಾಸಕ್ತಿ ಇತ್ತು ಅಂದರೆ ಸುಳ್ಳು. ಬಸವ್ವ ಇವಳ ಮೊಮ್ಮಗನಾದ ಅಭಿಲಾಶ ಈತನ ಮೇಲೆ ಅವಳು ಹೆಚ್ಚಿನ ಪ್ರೀತಿಯನ್ನು ಹೊಂದಿದ್ದಳು ಅಂದರೆ ನನ್ನ ಮುಂದೆ ಆ ರೀತಿ ಹೇಳಿಲ್ಲ ಅಂತಾ ಹೇಳುತ್ತಾರೆ. ಬಸವ್ವ ಇವಳು ತನಗೆ ಬಂದ ಹಿಸ್ಸೆಯನ್ನು ಶಾಂತಪ್ಪ ಈತನಿಗೆ ಮಾಡಿಕೊಡುತ್ತೇನೆ ಅಂತಾ ಯಾವತ್ತೂ ಹೇಳಿಲ್ಲ ಅಂದರೆ ಸುಳ್ಳು. ಅಸಲು ದಾವಾ ನಂಬರ 71/1999, ಎಫ್‌ಡಿಪಿ ನಂಬರ 10/2013 ಹಾಗೂ ಪ್ರಸ್ತುತ ಅರ್ಜಿ ಸಲ್ಲಿಸಿದ ವಿಷಯಗಳ ಬಗ್ಗೆ ಬಸವ್ವ ಇವಳಿಗೆ ಮಾಹಿತಿ ಇರಲಿಲ್ಲ ಅಂದರೆ ಸುಳ್ಳು.

**12.** ಬಸವ್ವ ಇವಳು ನನಗೆ ಯಾವುದೇ ಮಾಹಿತಿ ನೀಡದೇ ಇದ್ದರೂ ಸಹ ಶಾಂತಪ್ಪ ಈತನ ಮಾತುಕೇಳಿ ಸುಳ್ಳು ಮೃತ್ಯು ಪತ್ರವನ್ನು ಸೃಷ್ಠಿಸಿರುತ್ತೇವೆ ಅಂದರೆ ಸರಿಯಲ್ಲ. ಮೃತ್ಯು ಪತ್ರದಲ್ಲಿರುವ ಪೋಟೋ ಮತ್ತು ಸಹಿಗಳು ಬಸವ್ವ ಇವಳದು ಇರುವುದಿಲ್ಲ ಅಂದರೆ ಸುಳ್ಳು. ಮೃತ್ಯು ಪತ್ರದಲ್ಲಿ ಬಸವ್ವ ಇವಳ 1/3 ಹಿಸ್ಸೆ ಯಾವ ಆಸ್ತಿಗಳಲ್ಲಿ ಅಂತಾ ಬರೆದಿರುತ್ತೇವೆ. ಮೃತ್ಯು ಪತ್ರದಲ್ಲಿ ಸಿಟಿಎಸ್ ನಂಬರ ಬರೆದಿರುತ್ತೇವೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಮೃತ್ಯು ಪತ್ರದ 5 ನೇ ಸಬ್ ಪ್ಯಾರಾದಲ್ಲಿ ಸಿಟಿ ಸರ್ವೆ ನಂಬರ ಹೇಳಿರುತ್ತೇವೆ. ನಿಪಿ-2 ರ ಮೃತ್ಯು

ಪತ್ರದ 5 ನೇ ಪ್ಯಾರಾದಲ್ಲಿ "ನನ್ನ ಗಂಡನು ಕೊಟ್ಟ ಹಣದ ಸಹಾಯದಿಂದಲೇ ಹಾವೇರಿ ಶಹರದಲ್ಲಿ ಬಸವೇಶ್ವರ ನಗರದ ಎ ಬ್ಲಾಕ್, 10 ನೇ ಕ್ರಾಸ್‌ನಲ್ಲಿರುವ ಬಿ.ಶೇ.ಸ.ನಂ. 272/2+3 ಎ/2 ಇದರ ಪ್ಲಾಟ ನಂಬರ 8 ಬಿನ್ ಶೇತ್ಕಿ ಜಾಗೆಯನ್ನು ಖರೀದಿ ಮಾಡಿ ನನ್ನ ಗಂಡನೇ ಸದರ ಅಶೋಕನ ಹೆಸರಿನಲ್ಲಿ ನೋಂದಾಯಿಸಿ ಕೊಟ್ಟಿದ್ದನು. ನನ್ನ ಗಂಡನು ಸಾಯುವ ಪೂರ್ವದಲ್ಲಿ ನನ್ನ ಗಂಡನ ಪಗಾರದಲ್ಲಿ ನನ್ನ 3 ನೇ ಮಗನಾದ ಅಶೋಕನು ಒಂದು ಆರ್.ಸಿ.ಸಿ. ಮನೆಯನ್ನು ಸಹಿತ ಕಟ್ಟಿಕೊಂಡಿದ್ದನು." ಅಂತಾ ಬರೆದಿದೆ ಅಂದರೆ ಸರಿ.

**13.** ಶಿವಯೋಗಯ್ಯ ಕಲ್ಯಾಣಮಠ ಇವರ ವೈಯಕ್ತಿಕ ಕೇಸ್‌ಗಳು ನಮ್ಮ ಹಿರಿಯ ವಕೀಲರಾದ ಶ್ರೀ ನೆಲವಗಿ ವಕೀಲರ ಕಛೇರಿಯಲ್ಲಿ ಇರಲಿಲ್ಲ. ಅದೇ ರೀತಿ ಜೆ.ಎನ್.ಪಟೇಲ್ ಇವರ ಪ್ರಕರಣಗಳು ಸಹ ನಮ್ಮ ಕಛೇರಿಯಲ್ಲಿ ಇದ್ದವೂ ಅಂದರೆ ಸರಿಯಲ್ಲ. ಈ ಇಬ್ಬರೂ ನಮ್ಮ ಪಕ್ಷಗಾರರಾಗಿದ್ದರು ಸಹ ಇಲ್ಲಾ ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಶಿವಯೋಗಯ್ಯ ಹಾಗೂ ಜೆ.ಎನ್. ಪಟೇಲ್ ನನಗೆ ಹಾಗೂ ಶಾಂತಪ್ಪ ಇವರಿಗೆ ಆತ್ಮೀಯರು ಅಂದರೆ ಸುಳ್ಳು. ನಾನು ಹೇಳಿದಂತೆ ಅವರು ಮೃತ್ಯು ಪತ್ರಕ್ಕೆ ಸಹಿ ಮಾಡಿರುತ್ತಾರೆ ಅಂದರೆ ಸಾಕ್ಷಿ, ಬಸವ್ವ ಹೇಳಿದ್ದರಿಂದ ಸಹಿ ಮಾಡಿರುತ್ತಾರೆ ಅಂತಾ ಹೇಳುತ್ತಾರೆ. ಬಸವ್ವ ಇವಳು ಇವರಿಗೆ ಸಹಿ ಮಾಡುವಂತೆ ಯಾವ ಕಾಲದಲ್ಲಿಯೂ ಹೇಳಿಲ್ಲ ಅಂದರೆ ಸುಳ್ಳು. ಮೃತ್ಯು ಪತ್ರದಲ್ಲಿ ಶೆಡ್ಯೂಲ್ ಬರೆದಿಲ್ಲ. ಅದೇ ರೀತಿ ಮೃತ್ಯು ಪತ್ರದಲ್ಲಿ ಆಸ್ತಿಯ ಕ್ಷೇತ್ರ ಸಹ ಬರೆದಿಲ್ಲ ಅಂದರೆ ಸರಿ.

**14.** ಮೂಲ ಮೃತ್ಯು ಪತ್ರ ಬರೆಯುವ ಮುಂಚೆ ಬಸವ್ವ ಇವಳಿಂದ ಮಾಹಿತಿ ಪಡೆದುಕೊಂಡು ಅದರ ಕಚ್ಚಾ ಟಿಪ್ಪಣಿಯನ್ನು ತಯಾರಿಸಿರುತ್ತೇನೆ. ಸದರಿ ಟಿಪ್ಪಣಿಯ ಪ್ರತಿ ನನ್ನ ಬಳಿ ಇರುವುದಿಲ್ಲ. ಮೃತ್ಯು ಪತ್ರದ ಕರಡು ಪ್ರತಿಯನ್ನು ಮದ್ಯಾಹ್ನ 3-30 ರಿಂದ 4-30 ಘಂಟೆಯವರೆಗೆ ದಿನಾಂಕಃ 19-12-2010 ರಂದು ಬರೆದಿರುತ್ತೇನೆ. ನಾನು ಸದರಿ ಕರಡು ಪ್ರತಿಗೆ ಬಸವ್ವಳ ಸಹಿ ಪಡೆದಿಲ್ಲ.

ಬಸವ್ವಳಿಗೆ ಓದಲು ಬರೆಯಲು ಬರುತ್ತಿದ್ದ ಬಗ್ಗೆ ನಾನು ಪ್ರಶ್ನೆ ಕೇಳಿಲ್ಲ. ಬಸವ್ವ ಇವಳು ಹೆಬ್ಬಟ್ಟಿನ ಗುರುತನ್ನು ಹಾಕುತ್ತಿದ್ದಳು. ನಾನು ಮೃತ್ಯು ಪತ್ರಕ್ಕೆ ಬಸವ್ವ ಇವಳ 6 ಹೆಬ್ಬಟಿನ ಗುರುತು ಪಡೆದಿರುತ್ತೇನೆ. ಹೆಬ್ಬಟ್ಟಿನ ಗುರುತು ಪಡೆದಾಗ ಅದು ಯಾರದು ಅಂತಾ ಬರೆದು ಗುರುತಿಸಿದವರ ಸಹಿ ಮಾಡಬೇಕಾಗುತ್ತದೆ ಅಂದರೆ ಸರಿ. ಮೃತ್ಯು ಪತ್ರದಲ್ಲಿರುವ ಬಸವ್ವಳ ಹೆಬ್ಬಟ್ಟಿನ ಗುರುತುಗಳಿಗೆ ನಾನು ನನ್ನ ಸಹಿ ಹಾಕಿಲ್ಲ. ನನ್ನ ಸಮಕ್ಷಮ ಅವಳ ಹೆಬ್ಬಟ್ಟಿನ ಗುರುತನ್ನು ಅಟೇಸ್ಟ ಮಾಡಿದ ಬಗ್ಗೆ ನೆನಪಿಲ್ಲ. ಬಸವ್ವ ಇವಳು ನನ್ನ ಸಮಕ್ಷಮ ಹೆಬ್ಬಟ್ಟಿನ ಗುರುತು ಹಾಕಿದಾಗ ಅದನ್ನು ಗುರುತಿಸಲು ನನಗೆ ತೊಂದರೆ ಇರಲಿಲ್ಲ. ನಾನು ದಿನಾಂಕಃ 20-12-2010 ರಂದು ನೋಂದಣಿ ಕಛೇರಿಗೆ ಮದ್ಯಾಹ್ನ 3-00 ಘಂಟೆ ಸುಮಾರಿಗೆ ಹೋಗಿರುತ್ತೇನೆ. ನಾನು ನೋಂದಣಿ ಕಛೇರಿಯಲ್ಲಿ ಯಾವುದೇ ದಾಖಲೆಗೆ ಸಹಿ ಮಾಡಿಲ್ಲ. ಸದರಿ ಮೃತ್ಯು ಪತ್ರವನ್ನು ಸ್ಟಾಂಪ ಪೇಪರ ತಂದು ನಾನೇ ನಮ್ಮ ಕಛೇರಿಯಲ್ಲಿ ತಯಾರಿಸಿರುತ್ತೇನೆ. ಅದನ್ನು ಹಿಂದಿನ ದಿನ ತಯಾರಿಸಿರುತ್ತೇನೆ. ಮೃತ್ಯು ಪತ್ರಕ್ಕೆ ಬಸವ್ವಳ ಹೆಬ್ಬಟ್ಟಿನ ಗುರುತನ್ನು ದಿನಾಂಕಃ 20-12-2010 ರಂದು ಮದ್ಯಾಹ್ನ 2-00 ಘಂಟೆ ಸುಮಾರಿಗೆ ತೆಗೆದುಕೊಂಡಿರುತ್ತೇನೆ. ದಿನಾಂಕಃ 19-12-2010 ರಂದು ಮೃತ್ಯು ಪತ್ರಕ್ಕೆ ಹೆಬ್ಬಟ್ಟಿನ ಗುರುತು ಪಡೆಯಲು ತೊಂದರೆ ಇತ್ತಾ ಅಂದರೆ ಸಾಕ್ಷಿ ಆ ದಿನ ಮಾಹಿತಿ ನೀಡಿ ಕೊನೆಯ ಪ್ರತಿ ತಯಾರಿಸುವ ಕಾಲಕ್ಕೆ ಅವರು ಹೋಗಿದ್ದರಿಂದ ಸಹಿ ಪಡೆದಿಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಜೆಡಿಆರ್ ಪರ ವಕೀಲರು ಸಮಯ ಕೋರಿದ್ದರಿಂದ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

-ಸಹಿ- 25-11-2023
ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಹಾವೇರಿ.